

**ತನ್ನ ಹೆಸರಿನ ಅರ್ಥದಲ್ಲಿಯೇ ಅವಸಾನವನ್ನು ಗರ್ಭೀಕರಿಸಿಕೊಂಡಿರುವ 'ಪೊಂಪೈ', ಇಟಲಿಯ ನೇಪಲ್ಸ್ ನಗರದ ಸಮೀಪದಲ್ಲಿದೆ. ಜ್ವಾಲಾಮುಖಿಗೆ ಆಹುತಿಯಾಗಿ ಸರ್ವನಾಶವಾಗಿ ಹೋಗಿದ್ದ ಈ ನಗರದ ಅವಶೇಷಗಳೆಂದರೆ – ಅವು ಬರೀ ಭಗ್ನ ಕಲ್ಲು, ಮಣ್ಣಿನ ವಸ್ತುಗಳಲ್ಲ; ಕಲ್ಲಾಗಿ ಹೋದ ಮನುಷ್ಯರ ಕಳೇಬರಗಳೂ ಹೌದು!**

**■ ಸಂತೋಷ್ ರಾವ್ ಪೆರ್ಮುಡ**







ಪಡೆದುಕೊಂಡಿತು. ಅದೇ ರೀತಿ ಇಲ್ಲಿದ್ದ ಎಲ್ಲಾ ಪ್ರಾಣಿಗಳು, ಮನುಷ್ಯರು ಮತ್ತು ಸಂಪೂರ್ಣ ಪಟ್ಟಣವೇ ಕಲ್ಲಾಗಿ ಹೋಯಿತು. ಇವೆಲ್ಲವೂ ಇತ್ತೀಚೆಗೆ ವಿಜ್ಞಾನಿಗಳು ಹೇಳಿದ ನಂತರವೇ ತಿಳಿದಿದ್ದು.

## ದುರಂತದ ಆ ದಿನ

ಕ್ರಿ.ಶ. 79ರ ಅಕ್ಟೋಬರ್ 24ರ (ಸುಮಾರು 1,941 ವರ್ಷಗಳ ಹಿಂದೆ) ಬೇಸಗೆಯ ಮಧ್ಯಾಹ್ನ ದಕ್ಷಿಣ ಇಟಲಿಯ ಇಂದಿನ ಪೊಂಪೈ ನಗರದ ಸಮೀಪದ ವೆಸುವಿಯಸ್ ಜ್ವಾಲಾಮುಖಿ ಸ್ಫೋಟಿಸಿತು. ಸ್ಫೋಟದ ಕಿವಿಗಡಚಿಕ್ಕುವ ಸದ್ದಿಗೆ ಪೊಂಪೈನ ಜನರು ಚೆಲ್ಲಾಪಿಲ್ಲಿಯಾಗಿ ಓಡಿದ್ದರು. ಜ್ವಾಲಾಮುಖಿಯ ಬಿಸಿಯಾದ ದಟ್ಟ ಹೊಗೆ, ಲಾವಾ, ಬೂದಿ ಮತ್ತು ವಿಷಕಾರಿ ಅನಿಲಗಳು 20 ಮೈಲಿ ದೂರದವರೆಗೆ ಗಾಳಿಯಲ್ಲಿ ಚೆಲ್ಲಲಾರಂಭಿಸಿ, ಪಟ್ಟಣಕ್ಕೆ ಹರಡಿತು.

ಜ್ವಾಲಾಮುಖಿಯ ದಪ್ಪ ಬೂದಿಯು ಅಲ್ಲಿನ ಎಲ್ಲವನ್ನೂ ಕಪ್ಪು ಬಣ್ಣಕ್ಕೆ ತಿರುಗಿಸಿ ಅಗಾಧ ಬೂದಿಯನ್ನು ಉಗುಳುತ್ತಲೇ ಇತ್ತು. ಇದರಿಂದಾಗಿ ಜನರಿಗೆ ಸೂರ್ಯನನ್ನು ನೋಡಲೂ ಸಾಧ್ಯವಾಗಲಿಲ್ಲ. ಕೆಲವು ನಿವಾಸಿಗಳು ನಗರದಿಂದ ತಪ್ಪಿಸಿಕೊಂಡು ಓಡಿಹೋದರೆ, ಉಳಿದ ಒಂದಷ್ಟು ಮಂದಿ ತಮ್ಮ ಮನೆಗಳಲ್ಲೇ ಆಶ್ರಯ ಪಡೆದರು. ಮಧ್ಯರಾತ್ರಿಯ ವೇಳೆಗೆ ಲಾವಾ, ಬೂದಿ, ಕಲ್ಲು ಮತ್ತು ವಿಷಕಾರಿ ಅನಿಲಗಳು ಜ್ವಾಲಾಮುಖಿಯಿಂದ ಹೊರಗೆ ಚಲಿಸತೊಡಗಿದವು. ಗಂಟೆಗೆ ಸುಮಾರು 180 ಮೈಲು ವೇಗದಲ್ಲಿ ಪೊಂಪೈ ಪಟ್ಟಣದ ಕಡೆಗೆ ಹರಿದು ಬರುತ್ತಿದ್ದ ಈ ಉಲ್ಬಣವು ತನ್ನ ಹಾದಿಯಲ್ಲಿದ್ದ ಎಲ್ಲವನ್ನೂ ಸುಟ್ಟುಹಾಕಿತು. ಬೂದಿಯ ರಾಶಿಗಳು ಕೆಲವು ಸ್ಥಳಗಳಲ್ಲಿ ಒಂಬತ್ತು ಅಡಿ ಎತ್ತರಕ್ಕೆ ಬೆಳೆದು ಮನೆಯ ದ್ವಾರಗಳನ್ನೇ ಮುಚ್ಚಿಬಿಟ್ಟವು. ಆರಂಭಿಕ ಸ್ಫೋಟದ ಸುಮಾರು 19 ಗಂಟೆಗಳ ನಂತರ ಬೆಳಿಗ್ಗೆ 7 ಗಂಟೆ ಸುಮಾರಿಗೆ, ನಗರವು ಬೂದಿ ಮತ್ತು ಬಂಡೆಯ ಮಾರಕ ಮಿಶ್ರಣದಲ್ಲಿ ಸಂಪೂರ್ಣವಾಗಿ ಮರೆಯಾಗಿ, ಇಡೀ ಪೊಂಪೈ ನಗರ ಮತ್ತು ಅದರ ನಿವಾಸಿಗಳಲ್ಲಿ ಅನೇಕರು ಲಾವಾದ ಬೂದಿಯ ಹೊದಿಕೆಯಡಿಯಲ್ಲಿ ಸಮಾಧಿಯಾದರು.

1748ರಲ್ಲಿ ಈ ಪ್ರದೇಶವು ಪತ್ತೆಯಾಗುವವರೆಗೂ ಪೊಂಪೈ ಕಳೆದೇಹೋಗಿತ್ತು. ಇಲ್ಲಿ ನಿರಂತರವಾಗಿ ನಡೆಯುತ್ತಿರುವ ಉತ್ಖನನಗಳಿಂದ ವಿಜ್ಞಾನಿಗಳಿಗೆ ಆ ಭಯಾನಕ ದಿನದಂದು ಏನಾಯಿತು ಎಂಬುದನ್ನು ನಿಖರವಾಗಿ ಕಂಡುಹಿಡಿಯಲು ಸಾಧ್ಯವಾಯಿತು.